ಶ್ರೀ ಕೆ. ಹೆಚ್. ಹನುಮೇಗೌಡ :— ತಾವು ನಾಲ್ಕು ಜನ ಉಪಾಧ್ಯಾಯರುಗಳಿಗೆ ಮಾತ್ರ ಎಲ್. ಡಬ್ಲ್ಯೂ. ಏ. ಅನ್ನು ಮಾಡದೆ ರಜವನ್ನು ಮುಂಜೂರು ಮಾಡಿದ್ದೀರಿ, ನನಗೆ ತಿಳಿದಮಟ್ಟಿಗೆ ಈ ನಾಲ್ಕು ಜನರೂ ಟ್ರಾನ್ಸ್‌ಫರ್ ಆದವರು, ಮತ್ತು ಇವರೂ ಪ್ರತಿಭಟನೆಮಾಡಿ ಡ್ಯೂಟಿಗೆ ಹೋಗದೆ ಇದ್ದವರು. ಈ ನಾಲ್ಕು ಜನಕ್ಕೆ ಮಾತ್ರ ಎಲ್ ಡಬ್ಲ್ಯೂ ಏ ಮಾಡದೆ ರಜ ಕೊಟ್ಟು ಉಳಿದ ಉಪಾಧ್ಯಾಯರುಗಳಿಗೆ ಎಲ್ ಡಬ್ಲ್ಯೂ ಏ ಮಾಡಿರುವುದು, ಈ ಸರ್ಕಾರ ಅವರಿಗೆ ತಾರತಮ್ಯ ವ್ಯಾಡಿದಂತೆ ಅಲ್ಲವೇ ? ಈರೀತಿ ಒಬ್ಬರಿಗೊಂದು ಒಬ್ಬರಿಗೊಂದು ಮಾಡುವುದಕ್ಕೆ ಕಾರಣ ಏನು ;

ಶ್ರೀ ಎ ಆರ್. ಬದರೀನಾರಾಯಣ್ :—ತಾರತಮ್ಯ ಏನೂ ಇಲ್ಲ. 130 ಜನಗಳಲ್ಲಿ ನಾಲ್ಕು ಜನಕ್ಕೆ ಮಾತ್ರ ರಜ ಕೊಟ್ಟಿದೆ. ಕಾರಣ ಏನೆಂದರೆ, ಅವರು ಟ್ರಾನ್ಸ್‌ಫರ್ ಆಗುವುದಕ್ಕೆ ಮುಂಚೆ ರಜಾಕ್ಕೆ ಅರ್ಜಿಯನ್ನು ಕೊಟ್ಟಿದ್ದರು. ಅವರು ಅನಾರೋಗ್ಯದ ಸರ್ಟಿಫಿಕೇಟನ್ನು ಪ್ರಡ್ಯೂಸ್ ಮ್ಯಾಡಿ ಅರ್ಜಿಯನ್ನು ಕೊಟ್ಟಿದ್ದರಿಂದ, ಅವರಿಗೆ ಹಕ್ಕಿನ ರಜವನ್ನು ಮುಂಜೂರು ಮಾಡಲಾಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ :— ಈ 126 ಜನ ಉಪಾಧ್ಯಾಯರುಗಳಿಗೆ ಲೀವ್ ಕ್ರೆಡಿಟ್‌ನಲ್ಲಿದೆ ಆದ್ದರಿಂದ ರಜ ಮುಂಜೂರಾತಿಗೆ ಕೊಟ್ಟಿದ್ದನ್ನು ಇವರ ಅರ್ಜಿಗಳನ್ನು ಸಹಾನುಭೂತಿಯಿಂದ ಪುನಃ ಪುನರ್ ಪರಿಶೀಲನೆ ಮ್ಯಾಡುತ್ತೀರಾ?

ಶ್ರೀ ಎ. ಆರ್. ಬದರೀನಾರಾಯಣ್ :—ಇವರು ಟ್ರಾನ್ಸ್‌ಫರ್ ಆಗುವುದಕ್ಕೆ ಮುಂಚೆ ರಜದ ಅರ್ಜಿಯನ್ನು ಕೊಡಲಿಲ್ಲ. ಟ್ರಾನ್ಸ್‌ಫರ್ ಆದಮೇಲೆ, ಟ್ರಾನ್ಸ್‌ಫರ್ ಆದದ್ದಕ್ಕೆ ಪ್ರತಿಭಟನೆ ಮಾಡಿ, ಎಲ್ಲಿಗೆ ಹೋಗಬೇಕಾಗಿತ್ತೋ ಅಲ್ಲಿಗೆ ಹೋಗದೆ ರಜಾಕ್ಕೆ ಅರ್ಜಿಯನ್ನು ಹಾಕಿರುತ್ತಾರೆ. ಇದನ್ನು ಮೈಸೂರು ಸಿವಿಲ್ ಸರ್ವೀಸ್ ಸೆಕ್ಷನ್ 106 (ಎ) ಪ್ರಕಾರ ಲೀವ್ ಎಂದು ಮುಂಜೂರು ಮಾಡಿಲ್ಲ.

PERMIT FOR CONTRACT CARRIAGES BETWEEN BANGALORE AND SHIMOGA

31. SRI N. BASAVAIAH : (Chikkanayakanahally).—

Will the Minister for Labour be pleased to state :—

(*a*) the number of "on contract" permits given to the private bus owners from Bangalore-Shimoga (B. H. Road)-during the last one year ;

(*b*) whether it has come to the notice of the Government that number of "on contract" buses are running on this road without any permits;

(*c*) if so, the action taken by Government in this matter?

SRI AZEEZ SAIT:—(Minister for Labour).—

(*a*) No. contract permits have been given to any private bus owners to run contract carriages exclusively between Bangalore and Shimoga during the last one year.

(*b*) Yes

(*c*) Whenever such violations have been detected suitable action has been taken against the operators.

ಶ್ರೀ ಎನ್. ಬಸವಯ್ಯ :—ತಮ್ಮ ಉತ್ತರದಲ್ಲಿ ಕಳೆದ ವರ್ಷದಲ್ಲಿ ಯಾವ ಬಸ್‌ಗಳಿಗೂ ಪರ್ಮಿಟ್ ಕೊಡಲಿಲ್ಲ ಎಂದು ಹೇಳಿದ್ದೀರಿ, ಆದರೆ ಈಗಲೂ ಸಹ ಹೊಸ 7-8 ಸರ್ವಿಸ್ ಬಸ್‌ಗಳು ಬೆಂಗಳೂರು ಶಿವಮೊಗ್ಗ ರೋಡುಗಳಲ್ಲಿ ಓಡಾಡುತ್ತಿವೆ. ಅವು ಯಾವುವು?

†ಶ್ರೀ ಅಜೀಜ್ ಸೇಟ್ :—ಅವು ಬಹುಶಃ ಕಂಟ್ರಾಕ್ಟ್ ಕ್ಯಾರೇಜಸ್‌ಗಳು ಇರಬಹುದು. ಈ ಸದನದಲ್ಲಿ ನಾನು ಅನೇಕ ಸಾರಿ ಹೇಳಿದ್ದೇನೆ. ಅನೇಕ ಡಿಸ್ಟ್ರಿಕ್ಟಗಳಲ್ಲಿ ಆರ್. ಟಿ. ಎ. ಅವರಿಗೆ ಕಂಟ್ರಾಕ್ಟ್ ಕ್ಯಾರೇಜ್‌ಸ್‌ಗಳಿಗೆ ಪರ್ಮಿಟ್ ಕೊಡುವಂಥ ಪವರ್ಸ್ ಇರುತ್ತದೆ. ಹಿಂದೆ200 ಟಿಲ್ಲರೆ ಕಾಂಟ್ರಾಕ್ಟ್ ಕ್ಯಾರೇಜಸ್‌ಗೆ ಪರ್ಮಿಟ್ ತೆಗೆದುಕೊಂಡಿರುವವರು, ಎಲ್ಲಿಗೆ ಬೇಕಾದರೂ ತಮ್ಮ ಕ್ಯಾರೇಜಸ್‌ಗಳನ್ನು ಓಡಿಸಬಹುದು. ಅವರಿಗೆ ಇಂಥ ರೋಡು ಎಂದು ಇಲ್ಲ, ಟೈಮಿಂಗ್ಸ್ ಇಲ್ಲ, ಇಂಥ ಕಡೆ ಹೋಗಬೇಕು ಎಂದು ಇಲ್ಲ, ಎಲ್ಲಿಗೆ ಬೇಕೋ ಅಲ್ಲಿಗೆ ಹೋಗಬಹುದು

ಶ್ರೀ ಎನ್. ಬಸವಯ್ಯ :—ಈ ಕಂಟ್ರಾಕ್ಟ್ ಕ್ಯಾರೇಜಸ್‌ನವರಿಗೆ ಪಿಕ್ ಅಪ್ ಸ್ಟಾಂಡ್ ಬಿಟ್ಟು, ಪ್ಯಾಸೆಂಜರ್ಸ್ ಅನ್ನು ಬೇರೆ ಕಡೆಯಿಂದ ಪಿಕ್ ಅಪ್ ಮಾಡತಕ್ಕ ಪರವಾನೆ ಏನಾದರೂ ಇದೆಯೇ?

ಶ್ರೀ ಅಜೀಜ್ ಸೇಟ್ :—ಇದು ಆಗ ಕೂಡದು ಎಂದು ಸೆಕ್ಷನ್ 111ನ್ನು ನಾವು ಮಾಡಿದ್ದೇವೆ. ಇದನ್ನು ಮಾಡಿದರೂ ಸಹಿತ, ಕೆಲವು ಅಪರೇಟರ್ಸ್‌ಗಳು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಆದ್ದರಿಂದ ಸೆಕ್ಷನ್ 111 ಕ್ಕೆ ಇಲ್ಲಿ ತಿದ್ದುಪಡಿ ಮಾಡಿದ್ದೇವೆ. ಈ ರೀತಿ ಆಂಧ್ರ ಮತ್ತು ಇತರ ಸ್ಟೇಟ್‌ನಲ್ಲಿ ನಡೆಯುತ್ತಿದೆ. ಇದರ ಬಗ್ಗೆ ಹೈಕೋರ್ಟಿನಲ್ಲಿ ಸ್ಟೇ ಆಗಿರುವುದರಿಂದ ಅವರನ್ನು ಹೇಳುವವರು ಕೇಳುವವರು ಇಲ್ಲ. ಅವರು ಪಿಕ್ ಅಪ್ ಪ್ಯಾಸೆಂಜರ್ಸ್ ಅನ್ನು ಹಾಕಿಕೊಂಡು ಹೋಗುತ್ತಿರುವುದು ನಿಜ; ಎಂ. ಎಸ್. ಆರ್. ಟಿ. ಸಿ. ಸ್ಟ್ಯಾಂಡ್‌ನ ಅಕ್ಕಪಕ್ಕದಲ್ಲಿ ನಿಂತು ಹೋಗುವುದು ನಿಜ. ಕಾನೂನು ರೀತ್ಯ ಇವರಿಗೆ ಶಿಕ್ಷೆ ಮಾಡಬೇಕೇ ವಿನಹ, ಕಾನೂನು ಬಿಟ್ಟು ಮಾಡುವ ಹಾಗೆ ಇಲ್ಲ. ಇನ್ನೊಂದು ನಮ್ಮಲ್ಲಿ ನಾಲ್ಕು ಫ್ಲೈಯಿಂಗ್ ಸ್ಕ್ವಾಡುಗಳು ಕೆಲಸಮಾಡುತ್ತಿವೆ. ನಾವು ಬಂದ ಮೇಲೆ ಬಿಗಿ ಮಾಡಿದ್ದೇವೆ. ಇದಕ್ಕೆ ಸಂಬಂಧ ಪಟ್ಟಂತೆ 4 ರೇಂಜುಗಳಿವೆ, ನಾರ್ದರ್ನ್, ಸದರನ್, ಸೆಂಟ್ರಲ್ ಮತ್ತು ನಾರ್ತ ಈಸ್ಟರನ್ ರೇಂಜ್ ಎಂದು 4 ರೇಂಜುಗಳಿವೆ. ಆಗಸ್ಟ್ 1972 ರಿಂದ ಜುಲೈ 1973ರ ವರೆಗೆ 13,25,562 ರೂಪಾಯಿ ಜುಲ್ಮಾನೆ ವಸೂಲು ಮಾಡಿದ್ದೇವೆ. 1 ಲಕ್ಷ 23 ಸಾವಿರ ರೂಪಾಯಿ ಚಿಲ್ಲರೆ ಸದರನ್ ರೇಂಜಿನಲ್ಲಿ, 80456 ರೂಪಾಯಿ ನಾರ್ದರನ್ ರೇಂಜಿನಲ್ಲಿ, 54878 ರೂಪಾಯಿ ಚಿಲ್ಲರೆ ಸೆಂಟ್ರಲ್ ರೇಜಿನಲ್ಲಿ, 1 ಲಕ್ಷ 261 ರೂಪಾಯಿ ಚಿಲ್ಲರೆ ನಾರ್ತ ಈಸ್ಟರನ್ ರೇಂಜಿನಲ್ಲಿ, 8 ಲಕ್ಷ 69 ಸಾವಿರ ರೂಪಾಯಿ ಚಿಲ್ಲರೆ ಬೆಂಗಳೂರು ಸಿಟಿ ಟ್ರಾಫಿಕ್ ರೇಂಜಿನಲ್ಲಿ ವಸೂಲಾಗಿದೆ, ಸ್ಪೆಷಲ್ ಸ್ಕ್ವಾಡ್ 97841 ರೂಪಾಯಿ ವಸೂಲು ಮಾಡಿದೆ, ಒಟ್ಟು 1 ಲಕ್ಷ 25 ಸಾವಿರ ಚಿಲ್ಲರೆ ರೂಪಾಯಿ ಜುಲ್ಮಾನೆ ವಸೂಲು ಮಾಡಿದೆ ಜೊತೆಗೆ 92 ವೆಹಿಕಲ್ಸ್ ಸೀಜ್ ಮಾಡಿದ್ದೇವೆ, 6 ಲೈಸನ್ಸ್ ಸಸ್ಪೆಂಡ್ ಮಾಡಿದ್ದೇವೆ. ಅಲ್ಲದೆ ಮೋಟಾರ್ ವೆಹಿಕಲ್ಸ್ ಅಕ್ಟಿಗೆ ಕೆಲವು ತಿದ್ದು ಪಡಿ ಮಾಡಿದ್ದೇವೆ. ಮೇಲ್ಮನೆಯಲ್ಲಿ ಅದಕ್ಕೆ ಅಂಗೀಕಾರ ದೊರೆತ ನಂತರ ಬಹುಶಃ ಸ್ವಲ್ಪ ಕಂಟ್ರೋಲ್ ಮಾಡಬಹುದು.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ :—ಎಷ್ಟು ಕಂಟ್ರಾಕ್ಟ ಬಸ್ಸುಗಳನ್ನು ಹಿಡಿಯಲಾಗಿದೆ? ಎಷ್ಟು ಲೈಸೆನ್ಸ್ ಕ್ಯಾನ್ಸಲ್ ಮಾಡಲಾಗಿದೆ?

ಶ್ರೀ ಅಜೀಜ್ ಸೇಟ್ :—ಕ್ಯಾನ್ಸಲ್ ಮಾಡುವ ಪ್ರಶ್ನೆಯಲ್ಲ, ನಾವೇನು ತಿದ್ದುಪಡಿ ಮಾಡಿದ್ದೇವೆ, ಅದರಂತೆ ಕ್ಯಾನ್ಸಲ್ ಮಾಡುವುದಕ್ಕೇನು ಅಧಿಕಾರ ತೆಗೆದುಕೊಂಡಿದ್ದೇವೆ. ಅದರಂತೆ ಮಾಡಿರುವುದನ್ನು ಈಗ ತಾನೆ ಹೇಳಿದೆ. 13 ಲಕ್ಷ ರೂಪಾಯಿ ಚಿಲ್ಲರೆ ಫೈನ್ ಹಾಕಿದ್ದೇವೆ, ಎಂದು ಹೇಳಿದೆ.

ಶ್ರೀ ಎಂ. ಎಸ್. ಕೃಷ್ಣನ್ :—ಒಂದೇ ಸಲ ಇರುವ ತೊಂದರೆಯನ್ನು ನಿವಾರಣೆ ಮಾಡಲು ಸರಕಾರದವರೇ ಎಲ್ಲವನ್ನೂ ತೆಗೆದುಕೊಂಡು ಏಕೆ ನಡೆಸಬಾರದು?

ಶ್ರೀ ಅಜೀಜ್ ಸೇಟ್ : ಸರಕ್ಕಾರ ನಡೆಸುವುದಕ್ಕೆ ಮೆಷೀನರಿ ಇಲ್ಲ. ಎಂ. ಎಸ್. ಅರ್. ಟಿ. ಸಿ. ಅಟಾನಮಸ್ ಬಾಡಿ ಅದು ಕಂಟ್ರಾಕ್ಟ್ ಕ್ಯಾರೆಜುಗಳನ್ನು ತೆಗದುಕೊಳ್ಳಲು ತೀರ್ಮಾನಿಸಿದೆ, ಬಹುಶಃ ಕಳ್ಳವು ದಿವಸಗಳಲ್ಲಿ ಈ ಕೆಲಸವಾಗಬಹುದು. ಒಂದು ವಿಷಯವನ್ನು ಗಮನಿಸಬೇಕು. ತಮಿಳುನಾಡಿನಲ್ಲಿ ಸರಕಾರ ಕಾಂಟ್ರಾಕ್ಟ್ ಕ್ಯಾರೇಜುಗಳನ್ನು ಮತ್ತು ಸ್ಟೇಟ್ ಕ್ಯಾರೇಜುಗಳನ್ನು ಲೆಜಿಸ್ಲೇಷನ್ ಮೂಲಕ ತೆಗೆದುಕೊಳ್ಳಲು ಕಾನೂನು ಮಾಡಿತು. ಆದರೆ ಆ ಕಾನೂನು ಹೈಕೊರ್ಟಿನಲ್ಲಿ ಸ್ಟ್ರಕ್‌ಡೌನ್ ಆಗಿದೆ.

ನಾವೂ ಕಾನೂನು ತರಬಹುದೇ ಎಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ :—ನಾನು ಒಂದು ವಿಚಾರ ಅಧ್ಯಕ್ಷರ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು :—ತಾವು ಬೇರೆ ವಿಚಾರವಿದ್ದರೆ ಅದನ್ನು ಪ್ರಶ್ನೋತ್ತರ ಕಾಲವಾದ ಮೇಲೆ ಪ್ರಸ್ತಾಪ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ :—ಸ್ಪೆಷಲ್ ಸ್ಕ್ವಾಡ್‌ನವರು ಷರೀಕಾಗಿರುವುದರಿಂದ ಕಾಂಟ್ರಾಕ್ಟ್ ಕ್ಯಾರೇಜುಗಳನ್ನು ಇಷ್ಟು ಅವ್ಯವಸ್ಥೆಯಿಂದ ನಡೆಸುತ್ತಿದ್ದಾರೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್ :—ಇದುವರೆಗೆ ಹಿಡಿದು ಜುಲ್ಮಾನೆ ಹಾಕಿರುವ ವಿಚಾರವನ್ನು ನಾನು ಹೇಳಿದೆ.

LANDS GRANTED UNDER N. A. SCHEME

41 SRI S. KARIAPPA (Kanakapur).—

Will the Minister for Agriculture and Forests be pleased to state :—

(*a*) whether lands granted under N. A. scheme will be treated on a par with the revenue lands in respect of tenancy ;

(*b*) the action the Government intend to take against the persons who have snatched away the lands granted under the scheme ?